ದಿಃ 13-07-2016 ರಂದು ಸಾಕ್ಷಿಯನ್ನು ಸತ್ಯ ಪ್ರತಿಜ್ಞೆ ಮೇರೆಗೆ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ವಕೀಲ ರವರಿಂದಃ

ವಾದಿಯರು ಮತ್ತು 1 ನೇ ಪ್ರತಿವಾದಿ ರಾಯಪ್ಪ ಮತ್ತು ಮೃತ ಚೂನವ್ವ ಇವರ ಮಕ್ಕಳು ಎಂದರೆ ಗೊತ್ತಿಲ್ಲ. ನಾನು ಮೆಳವಂಕಿ ಗ್ರಾಮದವ. ರಾಯಪ್ಪನೂ ಮೆಳವಂಕಿಯವ. ಅದು ಸಣ್ಣ ಊರು. ರಾಯಪ್ಪ ಮೊದಲಿನಿಂದಲೂ ಪರಿಚಯ. ರಾಯಪ್ಪ ಶೇತ್ಕಿ ಬಿಟ್ಟು ಬೇರೆ ಉದ್ಯೋಗ ಮಾಡುತ್ತಿರಲಿಲ್ಲ ಎಂದರೆ ನಿಜ.

667/9 ಮತ್ತು 662/13 ಇವು ಮೆಳವಂಕಿಯ ಜಮೀನುಗಳು ಎಂದರೆ ಗೊತ್ತಿಲ್ಲ. 667/9 ಮತ್ತು 662/13 ರಾಯಪ್ಪ ಮತ್ತು ಆತನ ಅಣ್ಣ ತಮ್ಮಂದಿರ ಹಿರಿಯರ ಆಸ್ತಿಗಳು ಎಂದರೆ ನನಗೆ ಗೊತ್ತಿಲ್ಲ. ಈ ಜಮೀನುಗಳಲ್ಲಿ ರಾಯಪ್ಪನಿಗೆ 1/3 ಪಾಲು ಇದೆ ಎಂದರೆ ಗೊತ್ತಿಲ್ಲ. 1/3 ಭಾಗವನ್ನು ರಾಯಪ್ಪನು ರಾಮಪ್ಪ ಭೀಮಪ್ಪಾ ಕರೆವ್ವಗೋಳ ಇವರಿಗೆ ಖರೀದಿಗೆ ಕೊಟ್ಟನೆಂದರೆ ನನಗೆ ಗೊತ್ತಿಲ್ಲ. ಅದರಿಂದ ಬಂದ ಹಣದಿಂದ ರಾಯಪ್ಪ ದಾವಾ ಆಸ್ತಿಯನ್ನು ಖರೀದಿ ಮಾಡಿದನೆಂದರೆ ಸುಳ್ಳು.

ರಾಯಪ್ಪ ಖರೀದಿಗೆ ತೆಗೆದುಕೊಂಡ ದಿನಾಂಕ ಗೊತ್ತಿಲ್ಲ. ರಾಯಪ್ಪ ಜಮೀನನ್ನು ಖರೀದಿ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ರಾಯಪ್ಪ ಜಮೀನು ಖರೀದಿ ಮಾಡಲು ಸಾಲ ಮಾಡಿದ ಬಗ್ಗೆ ಕರಾರು ಪತ್ರದಲ್ಲಿ ಬರೆಸಿದ್ದ ಬಗ್ಗೆ ನನಗೆ ಗೊತ್ತಿಲ್ಲ. ಮೊದಲು ಆದ ಕರಾರುಪತ್ರದ ಬಗ್ಗೆ ನನಗೆ ಗೊತ್ತಿಲ್ಲ.

ರಾಯಪ್ಪನ ಹೆಸರು ಡೈರಿ ಪ್ರಕಾರ 6-12-1999 ರಂದು ಆಸ್ತಿಗೆ ನಮೂದಾಯಿತೆಂದರೆ ನನಗೆ ಗೊತ್ತಿಲ್ಲ. ಮೊದಲಿನ ಖರೀದಿ ಕರಾರು ಪತ್ರಕ್ಕೆ ನಾನು ಸಹಿ ಮಾಡಿಲ್ಲ. ಖರೀದಿ ಕಾಲಕ್ಕೆ ರಾಯಪ್ಪನ ಹೆಂಡತಿ ಮತ್ತು ಮಕ್ಕಳು ಸಹಿ ಮಾಡಿಲ್ಲ.

ದಾವಾ ಜಮೀನಿನ ಪೂರ್ವಕ್ಕೆ ಭೀಮಪ್ಪಾ ಪಾಟೀಲ ಇವರ ಜಮೀನು ಇದೆ ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ಬರೆಸಿದ್ದೇನೆ. ನಿಡಿ 4 ರಲ್ಲಿ ಪೂರ್ವಕ್ಕೆ ರಾಮನಿಂಗ ಭೀಮಪ್ಪಾ ಪಾಟೀಲ ಎಂದು ಇದೆ ಎಂದರೆ ನಿಜ. ಅವರು ಭೀಮಪ್ಪಾ ಪಾಟೀಲರ ಮಕ್ಕಳು. ನಿಡಿ 4 ರಲ್ಲಿ ಉತ್ತರಕ್ಕೆ ಕರೆಪ್ಪ ಬೆಣ್ಣಿ ಎಂದು ಇದೆ ಎಂದರೆ ನಿಜ. ಅದನ್ನು ರಾಯಪ್ಪ ಬರೆಸಿದ್ದಾರೆ. ಚಕಬಂದಿ ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ ರೀತಿ ಸರಿ ಇದೆ. ನಿಪಿ 4 ರಲ್ಲಿರುವ ಚಕಬಂದಿ ವ್ಯತ್ಯಾಸ ಇದೆ ಎಂದರೆ ನಿಜ.

ರೂ. 45,000/- ಮುಟ್ಟಿದ ಬಗ್ಗೆ ನಿಡಿ 4 ರಲ್ಲಿ ಬರೆದಿಲ್ಲ ಎಂದರೆ ನಿಜ. ಖರೀದಿ ಪತ್ರದ ದಿನಾಂಕದಂದು ದಾವೆ ಚಾಲ್ತಿಯಲ್ಲಿತ್ತು ಎಂದರೆ ನಿಜ. 2 ನೇ ಪ್ರತಿವಾದಿ ನನಗೆ ಅಣ್ಣ ತಮ್ಮ ಆಗಬೇಕು. ದುಂಡಪ್ಪ ಕಾಪಶಿ ಮತ್ತು ಈರಪ್ಪ ಕಾಪಶಿ ನನ್ನ ಅಣ್ಣ ತಮ್ಮಂದಿರು. ಕೆ.ಬಿ. ಗುಡಬಾವಿ ನನ್ನ ಸಂಬಂಧಿಕರು. ಭಂಡಾರಿ ನಮ್ಮ ಊರಿನವ. ಬಾಳಪ್ಪ ಬಬಲಿ ಊರಿನ ಹಿರಿಯರು.

ದಾವಾ ಆಸ್ತಿ ಹಿರಿಯರ ಆಸ್ತಿಯನ್ನು ಮಾರಿ ತೆಗೆದುಕೊಂಡ ಜಮೀನು ಎಂದರೆ ಗೊತ್ತಿಲ್ಲ. 2 ನೇ ಪ್ರತಿವಾದಿ ದಾವಾ ಆಸ್ತಿಯಲ್ಲಿ ಕಬ್ಜೆಯಲ್ಲಿಲ್ಲ ಎಂದರೆ ಸುಳ್ಳು. ಆತ ಈಗ ಕಬ್ಜೆಯಲ್ಲಿದ್ದಾನೆ. ರಾಯಪ್ಪ ಮೊದಲಿನಿಂದ ಕುಡಿಯುತ್ತಿದ್ದ ಎಂದರೆ ಸುಳ್ಳು. ಆತನು ಕುಡಿದಿದ್ದಾಗ ನಾವು ಕರೆದುಕೊಂಡು ಹೋಗಿ ಖೊಟ್ಟಿ ಖರೀದಿ ಪತ್ರ ಬರೆಸಿಕೊಂಡಿದ್ದೇವೆಂದರೆ ಸುಳ್ಳು. ನನ್ನ ಮುಖ್ಯ ವಿಚಾರಣೆಯಲ್ಲಿರುವ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ನನ್ನ ಸಂಬಂಧಿಕನಾಗಿರುವುದರಿಂದ ಅವನಿಗೆ ಅನುಕೂಲವಾಗಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಈ ಓ ಹೆ ಕೇ ಸರಿ ಇದೆ

ಹೆಚ್ಚುವರಿ. ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.
ಗೋಕಾಕ